# ಸ್ತ್ರೀವಾದದ ಮೂಲ ಪರಿಕಲ್ಪನೆ ಇರುವುದು ಮನುಷ್ಯತ್ವದಲ್ಲಿ

ಟ್ರಡಿಷನಲ್ ಫ್ಯಾಮಿಲಿ ಮತ್ತದರ ವ್ಯಾಲ್ಯೂ ಸಿಸ್ಟಮ್ ಮಹಿಳೆಯರ ಬದುಕಿನಲ್ಲಿ ಎಬ್ಬಿಸುವ ಹುಯಿಲಿನ ಬಗ್ಗೆ ತಿಳಿದುಕೊಳ್ಳಲು ದೊಡ್ಡ ಸಂಶೋಧನೆಯೇನೂ ಬೇಕಾಗಿಲ್ಲ. ಹತ್ತಿರದ ಪೊಲೀಸ್ ಠಾಣೆಯ ದಾಖಲೆಗಳನ್ನು ಒಮ್ಮೆ ಪರಿಶೀಲಿಸಿದರೆ ಸಾಕು. ವರದಕ್ಷಿಣೆ ಕಿರುಕುಳ, ಹತ್ಯೆ, ಕೌಟುಂಬಿಕ ದೌರ್ಜನ್ಯ, ಅವು ಸೃಷ್ಟಿಸುವ ಒತ್ತಡ, ಖಿನ್ನತೆಗಳ ಆಳ ಅಗಲಗಳು ನಮ್ಮೆದುರು ತೆರೆದುಕೊಳ್ಳುತ್ತವೆ. ಹಲವು ಬಾರಿ ಉದ್ಯೋಗಸ್ಥ ಮಹಿಳೆಗೂ ಕುಟುಂಬ ವ್ಯವಸ್ಥೆಯಲ್ಲಿ ತನ್ನ ಬೇಕು ಬೇಡಗಳನ್ನು ನಿರ್ಧರಿಸುವ ಆಯ್ಕೆಗಳೇ ಇರುವುದಿಲ್ಲ. ಹಾಗಂತ ಕುಟುಂಬ ವ್ಯವಸ್ಥೆಯೊಳಗೆ ಹೆಣ್ಣಿಗೆ ಅಗತ್ಯ ಬೆಂಬಲ ಸಿಗೋದೇ ಇಲ್ಲ ಅಂತಲ್ಲ. ಆದರೆ ಆ ಸಂಖ್ಯೆ ಖಂಡಿತವಾಗಿಯೂ ಕಡಿಮೆ. ಸಮಾಜ 'ಮಾಡರ್ನ್ ವುಮನ್' ಎಂದು ಪರಿಗಣಿಸುವ ಮಹಿಳೆಯರಲ್ಲೇ ಎಷ್ಟು ಮಂದಿ ಕುಟುಂಬದೊಳಗಿನ ದೈಹಿಕ, ಮಾನಸಿಕ ಹಿಂಸೆಯನ್ನು ಸಹಿಸಿಕೊಂಡು ಏನೂ ಆಗಿಲ್ಲವೆಂಬಂತೆ ಬಿಂಬಿಸಿಕೊಳ್ಳುತ್ತಾರೆ! ಆಧುನಿಕ ಮಹಿಳೆ ಆಗಿರುವುದೆಂದರೆ ಸಂಬಂಧಗಳನ್ನೆಲ್ಲಾ ಧಿಕ್ಕರಿಸುವುದು ಎನ್ನುವ ಕಲ್ಪನೆಯೇ ಅಸಂಬದ್ಧ. ತಮ್ಮ ಸ್ವಂತ ವ್ಯಕ್ತಿತ್ವವನ್ನು ಉಳಿಸಿಕೊಂಡೇ ಎಷ್ಟೋ ಮಹಿಳೆಯರು ಸಂಸಾರವನ್ನೂ ಚೆನ್ನಾಗಿ ಸರಿದೂಗಿಸಿಕೊಂಡು ಹೋಗುತ್ತಾರೆ. ಇಷ್ಟಕ್ಕೂ ಸ್ತ್ರೀವಾದದ ಮೂಲ ಪರಿಕಲ್ಪನೆಯಿರುವುದು ಮನುಷ್ಯತ್ವವನ್ನು ಉಳಿಸಿಕೊಳ್ಳುವುದರಲ್ಲಿ, ಸಂಬಂಧಗಳನ್ನು ಮುರಿದು ಹಾಕುವುದರಲ್ಲಿ ಅಲ್ಲ.



**ಫಾತಿಮಾ ರಲಿಯಾ**
ಗೃಹಿಣಿ

ಪರಂಪರೆ ಮತ್ತು ಸೋಕಾಲ್ಡ್ ಆಧುನಿಕತೆಯ ನಡುವೆ ಹೆಣ್ಣು ಅನುಭವಿಸುತ್ತಿರುವ ಸವಾಲುಗಳು ಏನು? ಹೊರನೋಟಕ್ಕೆ ಹೆಣ್ಣಿನ ಕೆಲಸ ಅರ್ಧಕ್ಕರ್ಧ ಕಡಿಮೆ ಆದಂತೆ ಕಾಣುತ್ತದೆ. ಆದರೆ ಸಾಂಪ್ರದಾಯಿಕ ಕೆಲಸಗಳು ಕಡಿಮೆಯಾದರೂ, ಇಂದಿನ ಹೆಣ್ಣು ಇದುವರೆವಿಗೂ ಅಸಾಂಪ್ರದಾಯಿಕ ಎನ್ನುತ್ತಿದ್ದಂತಹ ಎಷ್ಟೋ ಕೆಲಸಗಳಿಗೆ ಹೆಗಲು ಕೊಟ್ಟಾಗಿದೆ. ಗಂಡು ಮಾಡುವ ಯಾವುದೇ ಕೆಲಸವನ್ನು ತಾನೂ ಮಾಡಬಲ್ಲೆ ಎನ್ನುವ ರೊಚ್ಚಿನಲ್ಲಿ ಹೆಣ್ಣು ಅದನ್ನು ನಿಭಾಯಿಸಿಯೂ ಬಿಟ್ಟಳು. ಆದರೆ ಹಾಗೆ ನಿಭಾಯಿಸುವಾಗ ಆವರೆಗಿನ ತನ್ನ ಪಾಲಿನ ಸಾಂಪ್ರದಾಯಿಕ ಜವಾಬ್ದಾರಿಗಳನ್ನು ಆಗಾಗ ಹೆಗಲ ಮೇಲಿಂದ ತೆಗೆದಿರಿಸಿದರೆ ಪರವಾಗಿಲ್ಲ ಎನ್ನುವುದನ್ನು ಮರೆತೇಬಿಟ್ಟಳು. ಆಧುನಿಕ ಮಹಿಳೆ ಕಚೇರಿಯಲ್ಲಿ ತನ್ನನ್ನು ತಾನು ಸಾಬೀತುಗೊಳಿಸಲು ಬೆಸ್ಟ್ ಇರಬೇಕು; ಮಕ್ಕಳನ್ನು ಬೆಳೆಸುವುದರಲ್ಲಿ, ಅವರ ಹೋಮ್ ವರ್ಕ್ ಮಾಡಿಸುವುದರಲ್ಲಿ, ಫ್ಯಾನ್ಸಿ ಶಾಲೆಗಳ ಹತ್ತು ಹಲವಾರು ಪ್ರಾಜೆಕ್ಟ್‌ಗಳಿಗೆ ಸಾಮಾನು ಹೊಂದಿಸುವುದರಲ್ಲಿ, ಮಕ್ಕಳಿಗೆ ತರಹೇವಾರಿ ಟಿಫಿನ್ ಬಾಕ್ಸ್ ತಯಾರಿಸುವುದರಲ್ಲಿ ಬೆಸ್ಟ್ ಇರಬೇಕು. ಇನ್ನು ಗಂಡನಿಗೆ ಹೆಂಡತಿ ಆಗಿದ್ದರೆ ಸಾಲದು, ಸಂಗಾತಿಯೂ ಆಗಿರಬೇಕು, ಆತನ ಸ್ನೇಹಿತರು ಮನೆಗೆ ಬಂದರೆ ಅಡುಗೆ ಮಾಡಿ ಬಡಿಸುವುದಲ್ಲ, ಅವರ ಜೊತೆ ಕುಳಿತು ಮಾತನಾಡಬೇಕು. ಹಾಗೆ ಮಾತನಾಡಲು ಜಗತ್ತಿನ ಆಗುಹೋಗುಗಳನ್ನು ಬೇಕಾದಷ್ಟು ತಿಳಿದುಕೊಂಡಿರಬೇಕು. ದಿನದ ಯಾವ ಸಮಯದಲ್ಲಾದರೂ ಮನೆ ಯಾವುದಾದರೂ ಇಂಟೀರಿಯರ್ ಡಿಸೈನ್ ಪುಸ್ತಕದಿಂದ ಉದುರಿದ ಹಾಳೆಗಳ ಹಾಗಿರಬೇಕು, ಇದೆಲ್ಲದರ ಜೊತೆ ತನ್ನನ್ನು ತಾನು ದೈಹಿಕವಾಗಿ ಫಿಟ್ ಆಗಿಟ್ಟುಕೊಳ್ಳಬೇಕು. ಇಂದಿನ ಹೆಣ್ಣಿನ ಮೇಲಿರುವ ಒತ್ತಡಗಳಲ್ಲಿ ಇದು ಕೆಲವು ಮಾತ್ರ.

ನಮ್ಮ ಅಮ್ಮನ ಕಾಲಘಟ್ಟದವರ ಕಾಲದಲ್ಲಿ ಬೇರೆಯದೇ ಸಮಸ್ಯೆಗಳು ಇದ್ದರೂ ಅವರ ಮೇಲೆ ಈ ಮಟ್ಟದ ನಿರೀಕ್ಷೆಗಳು ಇರುತ್ತಿರಲಿಲ್ಲ. ಇಂದಿನ ಎಲ್ಲಾ ಜಾಹೀರಾತುಗಳೂ ಹೆಣ್ಣು ಎಷ್ಟು ಸಮರ್ಥೆ ಎಂದು ತೋರಿಸುತ್ತಾ ತೋರಿಸುತ್ತಾ ಹೆಣ್ಣಿನ ಮೇಲೆ ಪರೋಕ್ಷ ಒತ್ತಡಗಳನ್ನು ಹೇರುತ್ತಿವೆ. ಗಂಡಿಗೆ ಗಂಡಿನ ಆಟದ ಮೂಲಕವೇ ಉತ್ತರಿಸುತ್ತಾ, ಹಾಗೆ ಉತ್ತರಿಸುವ ಕ್ಷಣದಲ್ಲೂ ಹೆಣ್ತನವನ್ನು ಕಳೆದುಕೊಳ್ಳಬಾರದು ಎನ್ನುವುದು ಹೆಣ್ಣು ಅನುಭವಿಸುವ ದೊಡ್ಡ ಒತ್ತಡ.

1975ರಲ್ಲಿ ಶಿರ್ಲೆ ಕೋನ್ರಾನ್ ಎನ್ನುವ ಹೆಣ್ಣುಮಗಳೊಬ್ಬಳು ಮೊದಲಬಾರಿಗೆ ತನ್ನ ಪುಸ್ತಕದಲ್ಲಿ 'ಸೂಪರ್ ವುಮನ್' ಪದವನ್ನು ಉಪಯೋಗಿಸಿದಳು. ಬೆಟ್ಟಿ ಫ್ರಿಡ್ಮನ್ ಎನ್ನುವ ಅಮೇರಿಕದ ಸ್ತ್ರೀವಾದಿಯೊಬ್ಬಳು ತನ್ನ 'The Second Stage' ಪುಸ್ತಕದಲ್ಲಿ ಇದನ್ನೇ ಚರ್ಚಿಸಿದ್ದಾಳೆ. ಈ 'ಸೂಪರ್ ವುಮನ್' ಎನ್ನುವ ಮನೋಧರ್ಮ ಮಹಿಳೆಯನ್ನು ವಿಮೋಚನೆಗೊಳಿಸುವ ಬದಲಾಗಿ ದುಪ್ಪಟ್ಟಾಗಿ ಸರಪಳಿಗಳಲ್ಲಿ ಬಂಧಿಸಿದೆ ಎಂದು ಆಕೆ ವಾದಿಸುತ್ತಾಳೆ. ಸ್ತ್ರೀವಾದ ಈಗ ಹಿಡಿಯಬೇಕಾದ ದಾರಿ ಎಂದರೆ ಪರಂಪರಾಗತ ಕರ್ತವ್ಯ ಮತ್ತು ಜವಾಬ್ದಾರಿಗಳ ಪುನರ್ ನಿರ್ವಚನ. ಇದು ಗಂಡು ಮತ್ತು ಹೆಣ್ಣು ಇಬ್ಬರೂ ಸೇರಿ ನಿರ್ಧರಿಸಿಕೊಳ್ಳಬೇಕಾದ ಹೊಸ ನಿರ್ವಚನ. ಅದರೆ ಅದರ ಅನುಪಸ್ಥಿತಿಯಲ್ಲಿ ಹೆಣ್ಣುಮಕ್ಕಳು ಅನುಭವಿಸುವ ಒತ್ತಡ, ಸವಾಲು, ಪಡಿಪಾಟಲು ಹೆಣ್ಣಿನ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಮಾಡುತ್ತಿರುವ ಪರಿಣಾಮಗಳು ಯಾವುವು? ಮೊನ್ನೆ ನಮ್ಮ ಮಾನ್ಯ ಮಂತ್ರಿಗಳು ಮಾನಸಿಕ ಒತ್ತಡಗಳ ಮಾತನಾಡಬೇಕಿದ್ದಾಗ ಗುರುತಿಸಬೇಕಾದ್ದು ಇದನ್ನು. ನಾವು ಚರ್ಚಿಸಬೇಕಾಗಿರುವುದು ಈ ವಿಷಯಗಳನ್ನು. ಟಿ.ವಿ.ಗಳಲ್ಲಿ ಕೂತು ಬ್ರಹ್ಮಾಂಡದಷ್ಟು ಬಾಯಿ ತೆಗೆಯುವ ಬೊಗಳೆದಾಸರನ್ನು ಕುರಿತು ನಮಗೆ ಇನ್ಯಾವ ನಿರೀಕ್ಷೆಗಳೂ ಇಲ್ಲ. ಆದರೆ ರಾಜದೀಪ್ ಸರ್ದೇಸಾಯಿ, ಅಮಿತಾಭ್ ಮತ್ತು ಸುಧಾಕರ್ ಇವರುಗಳ್ಯಾರೂ ಅವಿದ್ಯಾವಂತರಲ್ಲ, ಸಮಾಜದಲ್ಲಿ ಘನತೆಯ ಸ್ಥಾನಮಾನ ಹೊಂದಿರುವವರು. ದೌರ್ಭಾಗ್ಯ ಏನೆಂದರೆ ಹೆಣ್ಣಿನ ವಿಷಯಕ್ಕೆ ಬಂದರೆ ಅವರಿಗಾಗಲಿ, ಟಿ.ವಿ.ಯಲ್ಲಿನ ಸ್ವಾಮಿಗಳಿಗಾಗಲಿ ಏನೂ ವ್ಯತ್ಯಾಸವಿಲ್ಲ.

ನನ್ನ ಗೆಳತಿಯೊಬ್ಬಳು ನನಗೆ ಒಂದು ಬಟ್ಟೆಯ ಕೈಚೀಲವನ್ನು ಉಡುಗೊರೆಯಾಗಿ ಕೊಟ್ಟಿದ್ದಳು. ಅದರ ಮೇಲಿದ್ದದ್ದು ಒಂದು ಮುಷ್ಟಿ ಬಿಗಿದ ಕೈ ಮತ್ತು ಒಂದು ಸಾಲು: **Nevertheless she persisted against all odds.** ಯಾವುದೇ ಪಂಥಕ್ಕೆ ಸೇರಿರಲಿ, ಯಾವುದೇ ವಿಚಾರಧಾರೆಯನ್ನು ಪ್ರತಿಪಾದಿಸುತ್ತಿರಲಿ, ಕಾವಿ, ಖಾಕಿ, ಖಾದಿ, ಹಸಿರು, ಬಿಳಿ ಯಾವುದೇ ಬಣ್ಣದ ಬಟ್ಟೆಯನ್ನು ಧರಿಸಿರಲಿ, ಆಗೀಗ ಇಂತಹ ನುಡಿಮುತ್ತುಗಳು ಉದುರುತ್ತಲೇ ಇರುತ್ತವೆ. ಕೆಲವೊಮ್ಮೆ ಸಿಟ್ಟಾಗುತ್ತಾ, ಕೆಲವೊಮ್ಮೆ ಲೇವಡಿ ಮಾಡುತ್ತಾ, 'Nevertheless' ನಾವು ಹೆಜ್ಜೆ ಮುಂದಿಡುತ್ತಲೇ ಇರುತ್ತೇವೆ. ಅದು ಅವರಿಗೂ ಗೊತ್ತು. ಅವರ ಹೆದರಿಕೆಯ ಮೂಲ ಇರುವುದು ಅಲ್ಲಿ.

ಪ್ರತಿಕ್ರಿಯಿಸಿ: feedback@sudha.co.in

